



## ನಿವೇದಿತಾ ಕನಸು ಈಡೇರಿತಾ?

‘ನಿವೇದಿತಾ’ ಎಂದರೆ ಪೆದ್ದು ಪೆದ್ದಾಗಿ ಕಂಗ್ಲಿಷ್‌ನಲ್ಲಿ ಮಾತಾಡುವ ಬಿಗ್‌ಬಾಸ್ ಹುಡುಗಿಯ ಮುಖವೇ ಬಹುತೇಕರ ಮನಸಲ್ಲಿ ಮೂಡುತ್ತದೆ. ಆದರೆ ಕಳೆದ ಹನ್ನೆರಡು ವರ್ಷಗಳಿಂದ ಕನ್ನಡ ಚಿತ್ರರಂಗದಲ್ಲಿರುವ, ಎರಡು ಬಾರಿ ರಾಜ್ಯಪ್ರಶಸ್ತಿಗಳ ಗರಿಯನ್ನು ತಮ್ಮ ಮುಡಿಗೇರಿಸಿಕೊಂಡಿರುವ ಪ್ರತಿಭಾನ್ವಿತ ನಟಿಯ ಹೆಸರೂ ನಿವೇದಿತಾ. 2006ರಲ್ಲಿ ‘ಕಲ್ಲರಳಿ ಹೂವಾಗಿ’ ಚಿತ್ರದ ಮೂಲಕ ಸಿನಿಮಾ ಜಗತ್ತಿಗೆ ಅಡಿಯಿಟ್ಟ ಇವರು ದಶಕ ಮೀರಿದ ನಟನೆಯ ಹಾದಿಯಲ್ಲಿ ನಟಿಸಿದ ಚಿತ್ರಗಳ ಪಟ್ಟಿ ದೊಡ್ಡದೇನಲ್ಲ. ಹಾಗೆ ಪಟ್ಟಿಯನ್ನು ಬೆಳೆಸುತ್ತಾ ಹೋಗುವ ಹಂಬಲವೂ ಅವರಿಗಿಲ್ಲ.

‘ನಾನು ಸಿನಿಮಾರಂಗದಲ್ಲಿಯೇ ಬ್ಯುಸಿಯಾಗಬೇಕು ಎಂದು ಯಾವತ್ತೂ ಅಂದುಕೊಂಡವಳಲ್ಲ. ಅದು ನನ್ನ ಬದುಕಿನ ಒಂದು ಭಾಗವಷ್ಟೆ. ಅದರ ಜತೆಗೇ ಪ್ರವಾಸ, ಓದು, ರಂಗಭೂಮಿ, ಬರವಣಿಗೆ ಎಲ್ಲವೂ ಇವೆ. ಹಾಗಾಗಿ ನನಗೆ ಇಷ್ಟವಾಗುವ, ನಟನೆಗೆ ಸಾಕಷ್ಟು ಅವಕಾಶ ಇದೆ ಅನಿಸುವಂಥ ಪಾತ್ರ ಬಂದಾಗ ಮಾತ್ರ ಒಪ್ಪಿಕೊಳ್ಳುತ್ತೇನೆ’ ಎಂದು ಖಡಾಖಂಡಿತವಾಗಿ ಹೇಳಬಲ್ಲಷ್ಟು ಪ್ರಬುದ್ಧೆ ಆಕೆ.

‘ಅವ್ವ’ ಮತ್ತು ‘ಡಿಸೆಂಬರ್ 1’ ಚಿತ್ರದಲ್ಲಿ ಅವರ ನಟನೆಗೆ ರಾಜ್ಯಪ್ರಶಸ್ತಿ ಸಿಕ್ಕಿದೆ. ಕಳೆದ ವರ್ಷ ಬಿಡುಗಡೆಯಾದ ‘ಶುದ್ಧಿ’ ಚಿತ್ರದಲ್ಲಿಯೂ ಅವರು ಭಿನ್ನ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ‘ಶುದ್ಧಿ’ ಚಿತ್ರ ಮತ್ತು ಅದರಲ್ಲಿನ ಅವರ ಪಾತ್ರ ಎರಡೂ ಸಾಕಷ್ಟು ಸುದ್ದಿಯಾದರೂ ಅವರೇನೂ ಸಾಲು ಸಾಲು ಸಿನಿಮಾಗಳಿಗೆ ಸಹಿ ಹಾಕಲಿಲ್ಲ. ಅಚ್ಯುತ್‌ಕುಮಾರ್ ನಿರ್ದೇಶನದ ’ಕೊಳ’ ನಾಟಕದ ಮೂಲಕ ರಂಗಭೂಮಿಯಲ್ಲಿ ತೊಡಗಿಕೊಂಡರು.

ಇದೀಗ ನಿವೇದಿತಾ ಸೂರಿ ಪಾಠಶಾಲೆಗೆ ಪ್ರವೇಶ ಪಡೆದಿದ್ದಾರೆ. ಅವರ ಹೊಸ ಸಿನಿಮಾ ‘ಪಾಪ್‌ಕಾರ್ನ್ ಮಂಕಿ ಟೈಗರ್’ ಚಿತ್ರದಲ್ಲಿ ನಿವೇದಿತಾ ಅವರೇ ನಾಯಕಿ. ಸೂರಿ ಅವರ ಸಿನಿಮಾದಲ್ಲಿ ಕೆಲಸ ಮಾಡಬೇಕು ಎಂಬುದು ಅವರ ಕನಸೂ ಆಗಿತ್ತಂತೆ. ಆ ಕನಸು ಈಡೇರುತ್ತಿರುವ ಖುಷಿ ಅವರಲ್ಲಿದೆ. ಆದರೆ ಅದನ್ನೂ ಏನೋ ಸಾಧನೆ ಎಂಬಂತೆ ಎಕ್ಸೈಟ್ ಆಗಿ ಹೇಳುವುದಿಲ್ಲ ಅವರು. ಎಲ್ಲವನ್ನೂ ಒಂದು ಬಗೆಯ ನಿರ್ಲಿಪ್ತವಾಗಿ ಸ್ವೀಕರಿಸುವುದು ಅವರ ಸ್ವಭಾವ. ಈ ಸ್ವಭಾವವೇ ಅವರನ್ನು ಮತ್ತೆ ಮತ್ತೆ ಹೊಸ ಬಗೆಯ ಅವಕಾಶಗಳು ಹುಡುಕಿಕೊಂಡು ಬರುವಂತೆ ಮಾಡುತ್ತಿವೆ.

ಸುತ್ತಾಟ, ಓದು, ನಟನೆ, ಬರವಣಿಗೆ ಹೀಗೆ ಹಲವು ಬಗೆಗಳಿಂದ ಬದುಕನ್ನು ಅರಿತುಕೊಳ್ಳುವ ಧ್ಯಾನದಲ್ಲಿರುವ ನಿವೇದಿತಾ ಅವರಿಗೆ ‘ಪಾಪ್‌ಕಾರ್ನ್ ಮಂಕಿ ಟೈಗರ್’ ಚಿತ್ರ ಕೂಡ ಅಂಥದ್ದೇ ಇನ್ನೊಂದು ಹೆಜ್ಜೆಯಾಗಿ ಕಾಣುತ್ತಿದೆ. ಹಾಗೆಯೇ ಇನ್ನೂ ಸಾಗಬೇಕಾದ ದೂರದ ಅರಿವೂ ಅವರಿಗಿದೆ.

■ ಪದ್ದು